ಡಿ.ಜಿ ಮತ್ತು ಐ.ಜಿ.ಪಿ ರವರು ಕರ್ನಾಟಕ ರಾಜ್ಯ ಪೊಲೀಸ್ ಮುಖ್ಯಸ್ಥರಾಗಿದ್ದು, ಅವರ ಅಧೀನದಲ್ಲಿ ಉತ್ತರ ಪೊಲೀಸ್ ವಲಯ ಕಾರ್ಯನಿರ್ವಹಿಸುತ್ತಿದೆ. ಐ.ಜಿ.ಪಿ ಹುದ್ದೆಯ ಅಧಿಕಾರಿಯು ಉತ್ತರ ವಲಯದ ಮುಖ್ಯಸ್ಥರಾಗಿದ್ದು, ವಿಜಯಪುರ ಜಿಲ್ಲಾ ಪೊಲೀಸ್, ಉತ್ತರ ವಲಯದ ಅಡಿಯಲ್ಲಿ ಬರುತ್ತದೆ. ವಿಜಯಪುರ ಜಿಲ್ಲಾ ಪೊಲೀಸ್ ಘಟಕಕ್ಕೆ ಪೊಲೀಸ್ ಅಧೀಕ್ಷಕರು ಮುಖ್ಯಸ್ಥರಾಗಿದ್ದು ಅವರ ಅಧೀನದಲ್ಲಿ ಮೂರು ಪೊಲೀಸ್ ಉಪವಿಭಾಗಗಳು, ಎಂಟು ಪೊಲೀಸ್ ವೃತ್ತ ಕಛೇರಿಗಳು ಹಾಗೂ ಇಪ್ಪತ್ತೆಂಟು ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಅಲ್ಲದೇ ಅವರ ಅಧೀನದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಡಿ.ಸಿ.ಆರ್.ಬಿ, ಡಿ.ಸಿ.ಐ.ಬಿ, ಡಿ.ಸಿ.ಬಿ, ಡಿ.ಎಸ್.ಬಿ, ಬೆರಳು ಮುದ್ರೆ ಘಟಕ, ನಿಸ್ತಂತು ಘಟಕ, ಶ್ವಾನದಳ ಹಾಗೂ ಇತರೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ.